ಇಲ್ಲಿ ಇದೇನಾಗುತ್ತಿದೆ? ಇಲ್ಲಿ ಮರವೇಕೆ ಬೀಳುತ್ತಿವೆ? ಇಲ್ಲಿ ಯಾವುದೇ ಪೆಟ್ರೋಲ್ ಪಂಪ್ ನಿರ್ಮಾಣವಾಗುತ್ತಿಲ್ಲ ಅಥವಾ ಇಲ್ಲಿ ಮ್ಯಾಕ್ ಡೊನಾಲ್ಡ್ ನಿರ್ಮಾಣವಾಗುತ್ತಿರಬೇಕು ಅಥವಾ ಫರ್ನೀಚರ್ ಮತ್ತು ಟಿಂಬರ್‌ಗೆ ಇವುಗಳನ್ನು ಕಡಿಯುತ್ತಿರಬೇಕು. ಎಲ್ಲರೂ ಪರಿಸರದ ಚರ್ಮವನ್ನು ಸುಲಿಯುತ್ತಿದ್ದಾರೆ. ಮಾನವನ ಪ್ರಜಾತಿ ಸಹ ಡೈನೊಸಾರ್‌ನಂತೆ ಲುಪ್ತವಾಗುವ ಸಮಯ ದೂರವಿಲ್ಲ.

ನನಗೆ ಇದ್ದಕ್ಕಿದ್ದಂತೆ ಶಾಲೆಯಲ್ಲಿ ಅರಣ್ಯ ನಾಶದ ಬಗ್ಗೆ ಮಕ್ಕಳೊಂದಿಗೆ ನಡೆದ ಡಿಬೇಟ್ ನೆನಪಾಯಿತು. ನಾವು ಮರಗಳನ್ನು ಸಾಮಾನ್ಯವಾಗಿ ಗಂಭೀರವಾಗಿ ಪರಿಗಣಿಸುವುದಿಲ್ಲ. ಮರ ಗಿಡಗಳು ನಮ್ಮ ಸುತ್ತಮುತ್ತ ಸುಮ್ಮನೆ ನಿಂತಿಲ್ಲ. ಅವು ವಾಸ್ತವವಾಗಿ ತಮ್ಮ ಕೆಲಸದಲ್ಲಿ ತೊಡಗಿರುತ್ತವೆ, ಹಗಲು ರಾತ್ರಿ ಕೆಲಸ ನಿರ್ವಹಿಸಿ ಪರಿಸರವನ್ನು ಕಾಪಾಡುತ್ತವೆ. ನಮ್ಮ ಭಾವಿ ಪೀಳಿಗೆಗೆ ಕಾಡುಗಳನ್ನು ಉಳಿಸಬೇಕು. ನಮ್ಮ ಪೂರ್ವಿಕರು ನಮಗಾಗಿ ಇಷ್ಟು ಸುಂದರ ವಾತಾವರಣವನ್ನು ನಿರ್ಮಿಸಿದ್ದಾರೆ. ನಾವಿದನ್ನು ನಾಶ ಮಾಡಬೇಕೆ?

ಸೌದೆ ಎಲ್ಲಿಂದ ಬರುತ್ತದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವನ್ನು ಮಕ್ಕಳಿಂದ ಅಪೇಕ್ಷಿಸುತ್ತೇನೆ. ಅವರ ಯುವ ಮಸ್ತಿಷ್ಕ ಅನಂತ ಸಾಧ್ಯತೆಗಳನ್ನು ಹುಡುಕಬಲ್ಲದು.

‘ಮರ–ಗಿಡಗಳನ್ನು ಒಂದನ್ನು ಕಡಿದರೆ ಎರಡನ್ನು ನೆಡಬೇಕು.’

‘ನಾವು ನಮ್ಮ ಮನೆ ಮತ್ತು ಫರ್ನೀಚರ್‌ಗಳನ್ನು ಮರವಿಲ್ಲದೆ ತಯಾರಿಸುವುದನ್ನು ಆರಂಭಿಸಬೇಕು. ಬೇರೆ ದಾರಿಗಳನ್ನು ಹುಡುಕಬೇಕು. ಬೇರೆ ಟೆಕ್ನಿಕ್‌ಗಳನ್ನು ಅಭಿವೃದ್ಧಿಪಡಿಸಬೇಕು.’

‘ಹೇಗೆ?’ ನಾನು ಅವರನ್ನು ಪ್ರಶ್ನಿಸುತ್ತೇನೆ.

‘ಹಳೆಯ ಫರ್ನೀಚರ್‌ಗಳು ಮತ್ತು ಮನೆಗಳ ಮರದ ವಸ್ತುಗಳಲ್ಲಿ ಸುಧಾರಣೆ ಮಾಡಿ ಅವುಗಳನ್ನು ರಿಸೈಕ್ಲಿಂಗ್ ಮಾಡಬಹುದು.’

‘ರಿಕ್ಲೈಮ್ಡ್ ಮರ ಹಾಳಾದ ನೆಲಮಾಳಿಗೆ ಮತ್ತು ಹಳೆಯ ಬ್ಯಾರಲ್‌ಗಳಿಂದ ಮರವನ್ನು ರಿಕ್ಲೈಮ್ ಮಾಡಬಹುದು.’

‘ಬಿದಿರಿನ ಉಪಯೋಗವನ್ನು ಪಡೆಯಬಹುದು. ಬಿದಿರು ಬೇಗ ಬೆಳೆಯುತ್ತವೆ.’

‘ಗ್ರೀನ್ ಫರ್ನೀಚರ್ ಮತ್ತು ಗ್ರೀನ್ ಬಿಲ್ಡಿಂಗ್ ನಿರ್ಮಿಸಲು ಆರಂಭಿಸಬೇಕು, ಇವು ಪರಿಸರಕ್ಕೆ ಯೋಗ್ಯವಾಗಿರಬೇಕು.’

ಮಕ್ಕಳ ಉತ್ತರ ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಮಕ್ಕಳು ಎಂಥ ಅದ್ಭುತ ಕಲ್ಪನೆಯನ್ನು ಮಾಡಬಲ್ಲರು. ಇಂದಿನ ಮಕ್ಕಳು ಹೊಸ ಕ್ರಾಂತಿಯನ್ನು ಮಾಡುತ್ತಾರೆ. ವಿದ್ಯುತ್, ಶಕ್ತಿ, ಕಾರ್ಖಾನೆ, ಮನೆ, ವಾಹನಗಳು ಎಲ್ಲವೂ ಗ್ರೀನ್ ಅಂದರೆ ಮಾಲಿನ್ಯರಹಿತವಾಗುತ್ತವೆ.

‘ಮನುಷ್ಯ ಸಹ ‘ಗ್ರೀನ್’ ಆಗಬಲ್ಲನೆ? ಹಸುರು ಮಾನವ!’ ನಾನು ಅಕಸ್ಮಾತ್ ಪ್ರಶ್ನಿಸುತ್ತೇನೆ.

‘ಹಸುರು ಮಾನವ?’

‘ಹೌದು, ಹಸುರು ಮಾನವ! ಮನುಷ್ಯ, ಸಮಾಜ ಮತ್ತು ವ್ಯಾಪಾರ, ಎಲ್ಲಾ ಹಸುರು?’ ಮಕ್ಕಳು ಯೋಚಿಸುತ್ತಾರೆ.

ವಾಚಾಳಿಯಾಗಿದ್ದ ನಿಕೋಲಸ್ ಒಮ್ಮೆಲೆ ಎದ್ದು ನಿಂತು ತಕ್ಷಣ ತನ್ನ ವಿಚಿತ್ರ ವಿಚಾರವನ್ನು ತರಗತಿಗೆ ಹೇಳಿದ, ‘ಮನುಷ್ಯ ಬೇಕೆನಿಸಿದಾಗ ಬಾಷ್ಪವಾಗಿ ಗ್ಯಾಸಿನ ಗುಳ್ಳೆಯಲ್ಲಿ ಪರಿವರ್ತನೆಗೊಂಡು, ಬೇಕೆನಿಸಿದಾಗ ಗಾಳಿಯಲ್ಲಿ ತೇಲಿ ಹಾಗೂ ಬೇಕೆನಿಸಿದಾಗ ಸಂಘಟಿತರಾಗಿ ಮರಳಿ ತನ್ನ ನಿಜ ಸ್ಥಿತಿಗೆ ಬರುವಂಥ ಟೆಕ್ನಾಲಜಿಯನ್ನು ನಾವು ಅಭಿವೃದ್ಧಿಪಡಿಸಬೇಕು. ಮನುಷ್ಯನ ಶುದ್ಧೀಕರಣಕ್ಕಾಗಿ ಅವರ ಬಾಷ್ಪೀಕರಣ!’

‘ನಾವೆಲ್ಲಾ ನೀರಿನ ಗುಳ್ಳೆಗಳು, ಹೊರಗಿನಿಂದ ಘನವಾಗಿ ಕಾಣಿಸುತ್ತೇವೆ, ಆದರೆ ಒಳಗಿನಿಂದ ದ್ರವ ಮತ್ತು ಚಂಚಲ. ನಮ್ಮಲ್ಲಿನ ಎಲ್ಲಾ ಗುಳ್ಳೆಗಳು ತಮ್ಮನ್ನು ಪ್ರತ್ಯೇಕ ಮತ್ತು ವಿಶೇಷವೆಂದು ತಿಳಿಯುತ್ತವೆ. ಪ್ರತಿಯೊಂದು ಗುಳ್ಳೆಯೊಳಗೆ ‘ನಾನು’ ಎಂಬುದು ಹುಟ್ಟುತ್ತದೆ. ನಾನೇ ಸುತ್ತಮುತ್ತ ಹಾರುತ್ತಿದ್ದೇನೆ, ನನಗೆ ಯಾರ ಅವಶ್ಯಕತೆಯಿಲ್ಲವೆಂದು ಅದು ಯೋಚಿಸುತ್ತದೆ. ಆದರೆ ಅದು ಒಡೆದಾಗ, ತನ್ನ ಅಸ್ತಿತ್ವ ಏನೇನೂ ಇಲ್ಲವೆಂದು ಅದಕ್ಕೆ ಮನದಟ್ಟಾಗುತ್ತದೆ. ತನ್ನ ಅಸ್ತಿತ್ವವನ್ನು ಶಾಶ್ವತವಾಗಿಟ್ಟುಕೊಳ್ಳಲು ಅದಕ್ಕೆ ಸೃಷ್ಟಿಯ ಇನ್ನಿತರ ಗುಳ್ಳೆಗಳೊಂದಿಗೆ ಕಲೆತಿರಬೇಕಿತ್ತು.’

ನಾನು ಒಂದೇ ಸಮನೆ ಹೇಳುತ್ತಲಿದ್ದೆ; ಮಕ್ಕಳು ಆಶ್ಚರ್ಯದಿಂದ ನೋಡುತ್ತಿದ್ದರು. ಒಬ್ಬ ವಿದ್ಯಾರ್ಥಿನಿ, ಇನ್ನೊಬ್ಬಳ ಕಿವಿಯಲ್ಲಿ ಉಸುರಿದಳು, ‘ಟೀಚರ್ ಕ್ರೇಜಿಯಾದರೆಂದು ತೋರುತ್ತದೆ. ಇವರ ಮತ್ತು ಇವರ ಹೆಂಡತಿಯ ಮಧ್ಯೆ ಡಿವೋರ್ಸ್ ವಿಚಾರ ನಡೆಯುತ್ತಿದೆ.’

## ಅಡ್ಡ ಹೆಸರಿನಲ್ಲೇನಿದೆ?

ನನ್ನ ಇಬ್ಬರು ಸಹೋದರರು ಮತ್ತು ಸಹೋದರಿ ನನ್ನನ್ನು ಭೇಟಿಯಗಲು ಸಮ್ಮರ್ ಹೌಸ್‌ಗೆ ಬರುತ್ತಿದ್ದರು. ನಾನು ಒಂದು ದಿನ ಮೊದಲೇ ಕಾರ್ಯತತ್ಪರನಾಗಿದ್ದೆ. ಅದೃಷ್ಟವಶಾತ್ ಗುಲ್ಲೇನ್ ಹಳ್ಳಿಯಲ್ಲಿ ಒಂದು ಉತ್ಕೃಷ್ಟ ಸೂಪರ್‌ಮಾರ್ಕೆಟ್ ಇದ್ದು, ಅಲ್ಲಿ ಅನೇಕ ವಿಧದ ಉತ್ತಮ ದರ್ಜೆಯ ವಸ್ತುಗಳು, ಸಾಮಗ್ರಿಗಳು ಸಿಗುತ್ತಿದ್ದವು. ನಾನು ಅದೆಷ್ಟೋ ಬಾರಿ ಸೂಪರ್‌ಮಾರ್ಕೆಟ್‌ಗೆ ಹೋಗಿ ಆಹಾರದ ಸಾಮಗ್ರಿಗಳನ್ನು ಸಂಗ್ರಹಿಸುತ್ತಿದ್ದೆ. ಚೀಸ್, ಬ್ರೆಡ್, ಬಿಸ್ಕಟ್, ಚಾಕೊಲೇಟ್, ಕೇಕ್, ಚಿಪ್ಸ್, ಹಣ್ಣುಗಳು, ತರಕಾರಿಗಳು. ಜೂಸ್, ಕೋಕ್, ಬೀರ್ ಮತ್ತು ವೈನ್‌ನ ಬುಟ್ಟಿಗಳನ್ನು ಒಟ್ಟು ಮಾಡಿದೆ. ನನ್ನ ಇಬ್ಬರು ಸಹೋದರರಿಗೆ ಕುಡಿಯುವ ಚಟವಿತ್ತು. ಅವರು ನನ್ನ ಹಾಗೆ ಸನ್ಯಾಸಿಗಳಲ್ಲ.

ನನ್ನ ಪರಿವಾರ ಕಲೆತಾಗ ಅದಕ್ಕೆ ವಿಶೇಷ ಕಳೆ ಬರುತ್ತದೆ. ನಾನು ಸಹೋದರಿ ಸಹೋದರರಲ್ಲಿ ಹಿರಿಯವನು. ನಾನು ಅವರಿಗೆ ರೋಲ್‌ಮಾಡಲ್ ಆಗಬೇಕೆಂದು ಬಾಲ್ಯದಿಂದಲೂ ಬಯಸಿದ್ದೆ, ಆದರೆ ಆ ಆಸೆ ಫಲಿಸಲಿಲ್ಲ. ನನ್ನ ಸಹೋದರರು ಮತ್ತು ಸಹೋದರಿ ನನಗಿಂತ ಹೆಚ್ಚು ಸಂಪಾದಿಸುತ್ತಿದ್ದಾರೆ. ನನಗಿಂತ ಹೆಚ್ಚನ್ನು ತಮ್ಮ ಜೀವನದಲ್ಲಿ ಪಡೆದಿದ್ದಾರೆ.

ನನ್ನ ತಮ್ಮ ವಿಲಿಯಮ್ ಓರ್ವ ಯಶಸ್ವಿ ವೈದ್ಯನಾಗಿದ್ದಾನೆ. ಅವನಿಗಿಂತ ಚಿಕ್ಕವನಾದ ಅಲ್ಬರ್ಟ್‌ಗೆ ಅವನದೇ ಆದ ಒಂದು ಪ್ರೈವೇಟ್ ಕಂಪನಿಯಿದೆ. ಜೂಲಿಯಾ ಎಲ್ಲರಿಗಿಂತ ಚಿಕ್ಕವಳು. ಅವಳು ಯುನೈಟೆಡ್ ಏಜೆನ್ಸಿಯಲ್ಲಿ ನೌಕರಿ ಮಾಡುತ್ತಾಳೆ. ಸಹೋದರ ವಿಲಿಯಮ್ ಸ್ಕಾಟಿಷ್ ಮಹಿಳೆಯನ್ನು ವಿವಾಹವಾಗಿದ್ದಾನೆ, ಅಲ್ಬರ್ಟ್ ಐರಿಶ್ ಮಹಿಳೆಯನ್ನು ವಿವಾಹವಾಗಿದ್ದಾನೆ. ನನ್ನಿಬ್ಬರು ಸಹೋದರರು ಯೂರೋಪಿಯನ್‌ರಂತೆ ಕಾಣುತ್ತಾರೆ. ಸಹೋದರಿ ಇಂಡಿಯನ್ನಳಂತೆ ಕಾಣುತ್ತಾಳೆ;

## ಕಳೆದ ಸಂಚಿಕೆಯಲ್ಲಿ



ಪಾಲ್‌ನಿಂದ ದೂರವಾಗುವುದಕ್ಕೆ ನೀನಾಳಿಗೆ ಅನೇಕ ಕಾರಣಗಳಿದ್ದವು. ಅವನ ಶಿಕ್ಷಕ ಹುದ್ದೆ ಅವಳಿಗೆ ನಗಣ್ಯವಾಗಿತ್ತು. ಅವನ ಸಾಂಪ್ರದಾಯಿಕ ಉಡುಗೆ ತೊಡುಗೆ ಅವಳ ಕಣ್ಣಿಗೆ ಕೀಳಾಗಿ ಕಾಣಿಸಿದ್ದವು. ತನ್ನ ಹೆತ್ತವರ ಬಿಜಿನೆಸ್ ಮುಂದುವರಿಕೆಗೆ ಪಾಲ್ ಯಾವುದೇ ರೀತಿಯಲ್ಲಿ ಆಸಕ್ತಿ ವ್ಯಕ್ತಪಡಿಸದೆ ಹೋದುದೂ ನೀನಾಳಿಗೆ ಬೇಸರ ಉಂಟುಮಾಡಿತು. ಯಾವ ವಿಧದಲ್ಲೂ ತನಗೆ ಲಾಭಕರವಲ್ಲದ ಸಂಗಾತಿಯೊಂದಿಗೆ ಅವಳು ಸಂಬಂಧ ಕಡಿದುಕೊಳ್ಳಲು ಯೋಚಿಸಿರುವುದರಲ್ಲಿ ಯಾವ ತಪ್ಪೂ ಇಲ್ಲವೇನೋ ಎಂದು ಪಾಲ್‌ಗೆ ಅನ್ನಿಸಿತು. ನೀನಾಳ ಮನೆಯಿಂದ ಹೊರಬಂದ ಪಾಲ್ ಮತ್ತೆ ಒಂಟಿಯಾಗಿ ವಾಸಿಸಬೇಕಾಯಿತು. ವಿಚ್ಛೇದನದ ಪತ್ರಗಳಿಗೆ ಸಹಿ ಮಾಡಿಸಿಕೊಳ್ಳಲು ಬಂದ ನೀನಾ, ಆ ವೇಳೆಗಾಗಲೇ ಮತ್ತೊಬ್ಬ ವ್ಯಕ್ತಿಯೊಂದಿಗೆ ವಾಸಿಸುತ್ತಿರುವುದು ತಿಳಿದು ಖಿನ್ನನಾದ. ಮೊದಲ ಪತ್ನಿ ಕೂಡ ಹೀಗೇ ದೂರವಾಗಿದ್ದಳು. ಇಬ್ಬರು ಮಕ್ಕಳನ್ನು ಹೆತ್ತಿದ್ದ ಅವಳಿಗೆ, ತಾನು ಯಾವ ರೀತಿಯಲ್ಲೂ ಜವಾಬ್ದಾರಿಯಿಂದ ಕೂಡಿದ ಗಂಡನಾಗಿ ಕಂಡಿರಲಿಲ್ಲ. ಎಲ್ಲರಿಂದ, ಪರಿಸ್ಥಿತಿಗಳಿಂದ ದೂರವಾಗಿ ಬಂದ ಸಂದರ್ಭಗಳನ್ನು ನೆನಪಿಸಿಕೊಂಡು ಪಾಲ್ ಬೇಸರದಲ್ಲಿ ಮುಳುಗಿದ.